ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು -1**

ಸಂಖ್ಯೆ: ಸಿ5(1)ನಿ.ರದ್ದು/01/2021-22 ದಿನಾಂಕ: 13.08.2021

**ಜ್ಞಾಪನ**

ವಿಷಯ: ಶ್ರೀ.ಹರೀಶ್.ಹೆಚ್.ಜಿ, ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ,
ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು,
ಇವರ ನಿಯೋಜನೆ ರದ್ದುಪಡಿಸುತ್ತಿರುವ ಬಗ್ಗೆ.

ಉಲ್ಲೇಖ:1. ಸರ್ಕಾರದ ಪತ್ರ ಸಂಖ್ಯೆ: ಇಪಿ 208 ಎಸ್.ಇ.ಎಸ್ 2019,
ದಿನಾಂಕ: 04.08.2020.

2. . ಈ ಕಛೇರಿ ಜ್ಞಾಪನ ಸಂಖ್ಯೆ: ಸಿ1(4)ಕ.ವರದಿ/ನಿಯೋಜನೆ.ಬಿಡು 01/2020-21,
ದಿನಾಂಕ: 01.12.2020.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ಹರೀಶ್.ಹೆಚ್.ಜಿ, ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ,ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರನ್ನು ಉಲ್ಲೇಖಿತ ಆದೇಶದಂತೆ ಶಿಕ್ಷಣ ಸಚಿವಾಲಯದ ಮಾಹಿತಿ ಕೇಂದ್ರದ ಸಮನ್ವಯಾಧಿಕಾರಿಕಾರಿಯಾಗಿ ನಿಯೋಜಿಸಿ ಆದೇಶಿಸಲಾಗಿದೆ.

ಈ ಕಛೇರಿಯ ಇ-ಆಡಳಿತ ವಿಭಾಗದಲ್ಲಿ ವರ್ಗಾವಣೆ ತಂತ್ರಾಂಶ, ಶಿಕ್ಷಕರ ಪ್ರಶಸ್ತಿ, ಇ-ಪಾರ್, ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಿಸಿದ ತಂತ್ರಾಂಶ, ಐ.ಸಿ.ಟಿ ತಂಡಕ್ಕೆ ನೀಡಿರುವ ವಿವಿಧ ತಂತ್ರಾಂಶಗಳಾದ ಹೊಸ ಶಾಲೆ ನೋಂದಣಿ, ನವೀಕರಣ, ಆರ್.ಟಿ.ಇ ದಾಖಲಾತಿ / ಶುಲ್ಕ ಮರುಪಾವತಿ ಇತ್ಯಾದಿ ಕಾರ್ಯಗಳ ಸಮರ್ಪಕ ನಿರ್ವಹಣಾ ಕಾರ್ಯಕ್ಕೆ ಅಧಿಕಾರಿಗಳ ಕೊರತೆಯಿದ್ದು, ಕಛೇರಿ ಕೆಲಸ ಕಾರ್ಯಗಳಿಗೆ ತೀವ್ರ ತೊಂದರೆಯಾಗುತ್ತಿರುತ್ತದೆ. ಪ್ರಯುಕ್ತ ಯಾವುದೇ ಬಿಡುಗಡೆ ಆದೇಶದ ನಿರೀಕ್ಷಣೆ ಮಾಡದೇ, ತುರ್ತಾಗಿ ಸದರಿ ಕರ್ತವ್ಯಗಳಿಂದ ಬಿಡುಗಡೆ ಹೊಂದಿ,

1. ದಿನಾಂಕ: 31.08.2021 ರೊಳಗೆ ಈ ಕಛೇರಿಯಲ್ಲಿ ವರದಿ ಮಾಡಿಕೊಳ್ಳುವುದು.
2. ತಪ್ಪಿದಲ್ಲಿ, ಸೆಪ್ಟೆಂಬರ್-2021 ಮಾಹೆಯಿಂದ ವೇತನವನ್ನು ತಡೆಹಿಡಿಯಲಾಗುವುದು.
3. ದಿ: 31.08.2021ರೊಳಗೆ ಸದರಿ ಕಛೇರಿಯ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ, ತಾವು ಉದ್ದೇಶ ಪೂರ್ವಕವಾಗಿ ಆದೇಶ ಉಲ್ಲಂಘನೆ ಮಾಡಿರುವಿರೆಂದು ಭಾವಿಸಿ, ತಮ್ಮ ಹೇಳಿಕೆ ಏನೂ ಇಲ್ಲ ಎಂದು ಪರಿಗಣಿಸಿ, ದೋಷಾರೋಪಣ ಪಟ್ಟಿ ಸಿದ್ಧಪಡಿಸಿ ಜಾರಿಗೊಳಿಸಲಾಗುವುದು.
4. ಈ ಕುರಿತು ಅನಗತ್ಯ ಪತ್ರ ವ್ಯವಹಾರ ಮಾಡಿದಲ್ಲಿ, ಸಿ.ಸಿ.ಎ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ತಿಳಿಯಪಡಿಸಿದೆ.

**(ಮಾನ್ಯ ಆಯುಕ್ತರ ಆದೇಶದ ಮೇರೆಗೆ)**

(ಡಾ. ರೂಪಶ್ರೀ ಎಸ್, ಕೆ.ಎ.ಎಸ್)
ಜಂಟಿ ನಿರ್ದೇಶಕರು(ಆಡಳಿತ)

**ರವರಿಗೆ,**

1. ಶ್ರೀ.ಹರೀಶ್.ಹೆಚ್.ಜಿ, ಸಹಾಯಕ ನಿರ್ದೇಶಕರು (ನಿಯೋಜನೆ), ಮಾಹಿತಿ ಕೇಂದ್ರ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

**ಪ್ರತಿಯನ್ನು:**

1. ಸರ್ಕಾರದ ಅಧೀನ ಕಾರ್ಯದರ್ಶಿ(ಸಾಮಾನ್ಯ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಕಳುಹಿಸುತ್ತಾ ಅಧಿಕಾರಿಯ ಅವಶ್ಯಕತೆ ಇರುವುದರಿಂದ ಸದರಿ ಅಧಿಕಾರಿಯನ್ನು ಕೂಡಲೇ ಬಿಡುಗಡೆಗೊಳಿಸುವಂತೆ ಕೋರಿದೆ.
2. ಕಛೇರಿ ಪ್ರತಿ.

13/8/21
(HARISHA H G)